**ಓಎಸ್ ನಂ. 52/2021**

**ಡಿ.ಡಬ್ಲೂ-1**

**ದಿನಾಂಕಃ 03-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ 7, 8 ಮತ್ತು 12 ನೇ ಪ್ರತಿವಾದಿ ಪರ ಶ್ರೀ ಎಮ್ಎಮ್ಎಚ್ ವಕೀಲರಿಂದ.**

1. ನಾವು 3 ಜನ ಅಣ್ಣ-ತಮ್ಮಂದಿರು ಇರುತ್ತೇವೆ. ನನ್ನ ತಂದೆತಾಯಿ ತೀರಿಕೊಂಡಿರುತ್ತಾರೆ. ನಮಗೆ 4 ಜನ ಅಕ್ಕ-ತಂಗಿಯರು ಇರುತ್ತಾರೆ. ಸದರಿಯವರ ಹೆಸರು ಶಿವಮ್ಮ, ನಿಂಗವ್ವ, ಬಸಮ್ಮ ಮತ್ತು ಮಡಿವಾಳವ್ವ ಅಂತ ಇರುತ್ತದೆ. ನಾವು ಸದರಿಯವರಿಗೆ ಪಾಲು ಕೊಟ್ಟಿರುವುದಿಲ್ಲ ಎಂದರೆ ಸರಿ. ನಮ್ಮ ಅಣ್ಣ-ತಮ್ಮಂದಿರ ನಡುವೆ ಪಾಲು ವಿಭಾಗ ಆಗಿರುತ್ತದೆ. ನಮ್ಮ ನಡುವೆ ಪಾಲು ವಿಭಾಗ ಆಗಿದೆ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

2. ಪಾಲು ವಿಭಾಗದಲ್ಲಿ ಸರ್ವೆ ನಂಬರ 90 ರಲ್ಲಿ ನನಗೆ, ಶಿವಪ್ಪ ಮತ್ತು ಈರಪ್ಪ ಕೊಡಲಾಗಿರುತ್ತದೆ. ಈರಪ್ಪನಿಗೆ 24 ಎಕರೆ ಬಂದಿರುತ್ತದೆ, ನನಗೆ 14 ಎಕರೆ ಬಂದಿರುತ್ತದೆ, ಈರಪ್ಪನಿಗೆ 23 ಎಕರೆ ಬಂದಿರುತ್ತದೆ. ನಮ್ಮ 4 ಜನ ಅಕ್ಕ-ತಂಗಿಯರಿಗೆ ಬಂಗಾರ ಮತ್ತು ಹಣ ಕೊಟ್ಟಿರುತ್ತೇವೆ. 10 ನೇ ಪ್ರತಿವಾದಿಗೆ 2 ತೊಲೆ ಬಂಗಾರ ರೂ.1 ಲಕ್ಷ ಕೊಟ್ಟಿರುತ್ತೇವೆ. ವಾದಿಗೆ 2 ತೊಲೆ ಬಂಗಾರ ಮತ್ತು ರೂ.60,000/- ಕೊಟ್ಟಿರುತ್ತೇವೆ. 11 ನೇ ಪ್ರತಿವಾದಿಗೆ 2 ತೊಲೆ ಬಂಗಾರ ಮತ್ತು ರೂ.1,20,000/- ಕೊಟ್ಟಿರುತ್ತೇವೆ. 9 ನೇ ಪ್ರತಿವಾದಿಗೆ 2 ತೊಲೆ ಬಂಗಾರ ಮತ್ತು ರೂ.70-80 ಸಾವಿರ ಕೊಟ್ಟಿರುತ್ತೇವೆ. ಸದರಿ ಮೇಲೆ ಹೇಳಿದ ಹಣ ಮತ್ತು ಬಂಗಾರ ತೋರಿಸುವ ದಾಖಲಾತಿಗಳು ಇರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.